ಹೊತ್ತು ಇಲ್ಲೇ ಸೇರೋಣ' ಎಂದ ಅಭಿ.

ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ನಿಸ್ತಂತು ಸಂವಹನ ಬಳಕೆ' ಎಂಬ ವಿಷಯದಲ್ಲಿ ಆರು ತಿಂಗಳು ಅಧ್ಯಯನ ನಡೆಸುವುದಕ್ಕಾಗಿ ಇಸ್ರೇಲಿನಿಂದ ಅಭಿ ಮತ್ತು ಮುರಾರಿಗೆ ಫೆಲೊಶಿಪ್ ಸಮೇತ ಕರೆ ಬಂತು.

ಇಸ್ರೇಲಿಗೆ ಹೊರಡುವ ಎಲ್ಲಾ ತಯಾರಿ ಮುಗಿದ ಮೇಲೆ ಹಿಂದಿನಂತೆಯೇ ಮತ್ತೆ ಎಲ್ಲರೂ ಆನೆಮಹಲ್ ಮನೆಯಲ್ಲಿ ಸೇರಿದರು.

ಅಭಿ ಮಾತಾಡಿದ, 'ಇಲ್ಲಿ ನಾವು ಏನು ಮಾಡುವ ಉದ್ದೇಶ ಹೊಂದಿದ್ದೇವೆ ಎಂದು ಈಗ ವಿವರವಾಗಿ ಹೇಳುವುದು ಕಷ್ಟ. 'ನಾವು' ಅಂದರೆ, ನಾವು ಎಲ್ಲರೂ' ಎಂದು ಅರ್ಥ. ಇಸ್ರೇಲಿಗೆ ಹೋಗಿ ಬಂದ ನಂತರ ಮುರಾರಿ ಮತ್ತು ನಾನು ಎಲ್ಲವನ್ನೂ ನಿಮಗೆ ಹೇಳುತ್ತೇವೆ. ಆಗಲೂ ಸ್ವಲ್ಪವೇ ಸ್ವಲ್ಪ ಮಾತಿನಲ್ಲಿ ಹೇಳಲು ಸಾಧ್ಯವಾದೀತು. ಉಳಿದುದನ್ನು ನಾವೆಲ್ಲರೂ ಒಟ್ಟಾಗಿ ಕ್ರಿಯೆಯಲ್ಲಿ ತೋರಿಸಬೇಕು' ಎಂದು ಹೇಳಿದ.

ಮುರಾರಿ ಹೇಳಿದ, 'ಒಂದು ಬೇರೆ ದೇಶವನ್ನು ನೋಡಿ ಬಂದರೆ ನಮ್ಮ ದೇಶ ಹೇಗಿರಬೇಕು, ನಮ್ಮ ಕೃಷಿ ಹೇಗಿರಬೇಕು, ನಮ್ಮ ಬದುಕು, ನಮ್ಮ ರಸ್ತೆಗಳು ಹೇಗಿರಬೇಕು ಇತ್ಯಾದಿ ಹತ್ತು ಹಲವು ಸಂಗತಿಗಳ ಬಗ್ಗೆ ನಾವು ಯೋಚಿಸತೊಡಗುತ್ತೇವೆ. ಬೇರೆ ದೇಶಕ್ಕೆ ಹೋಗಿ ಅಲ್ಲಿ ನಡೆದಿರುವ ಅಭಿವೃದ್ಧಿ ಕೆಲಸಗಳನ್ನು ನೋಡಿಕೊಂಡು ಬಂದರೆ, ನಮ್ಮಲ್ಲಿ ಏನು ಅಭಿವೃದ್ಧಿ ಆಗಬೇಕೊ ಅದನ್ನು ಮಾಡಲು ಬೇಕಾದ ಹೊಸ ಅರಿವು ಲಭಿಸುತ್ತದೆ'

ಅಭಿ ಮತ್ತು ಮುರಾರಿ ಇಸ್ರೇಲಿಗೆ ಹೋದ ಮರುದಿನವೇ ಸೂರ್ಯಕಾಂತ ರಾನಡೆ ಬಂದರು. ಅಭಿ ಮತ್ತು ಮುರಾರಿ ಇಸ್ರೇಲಿಗೆ ಹೋಗಿರುವ ವಿಚಾರ ಮತ್ತು ಅವರು ಹೋಗಿರುವ ಉದ್ದೇಶ ತಿಳಿದು ಬಹಳ ಸಂತೋಷಪಟ್ಟರು; 'ಅವರಿರುವಾಗಲೇ ಬಂದಿದ್ದರೆ ಹೆಚ್ಚು ಸಂತೋಷವಾಗುತ್ತಿತ್ತು' ಎಂದರು. ಕೂಡಲೇ ನರಹರಿ, ಹೌದು, ಅವರಿಗೆ ಶುಭಾಶಯ ಹೇಳಬಹುದಾಗಿತ್ತು. ಪರವಾಗಿಲ್ಲ ಬಿಡಿ. ಬರುವ ಮೊದಲು ನಿಮಗೆ ತಿಳಿಸುತ್ತೇನೆ. ಶುಭ ಪ್ರಯಾಣದ ಬದಲು ಶುಭ ಸ್ವಾಗತ ಹೇಳಬಹುದು' ಎಂದು ನಕ್ಕ.

ವರ್ಷಗಳ ನಂತರ ನರಹರಿ ನಕ್ಕ ಸಶಬ್ದವಾದ ನಗುವಾಗಿತ್ತದು! ಮಕ್ಕಳೂ ಸೇರಿದಂತೆ ಎಲ್ಲರೂ ಹರ್ಷಭರಿತ ಆಶ್ಚರ್ಯದಿಂದ ನರಹರಿಯ ಮುಖವನ್ನೇ ದಿಟ್ಟಿಸಿದರು. ಆಹಾ, ಎಂದ ಬದಲಾವಣೆ ಎಂದುಕೊಂಡಳು ಸುಕೃತಿ. ಕಣ್ಣರಳಿಸಿ ನೋಡಿ ನಿಂತಿದ್ದ ರಾನಡೆ ಅಲ್ಲಾಡದೆ ಹಾಗೆಯೇ ನಿಂತುಬಿಟ್ಟಿದ್ದರು! ಹೀಗೂ ಒಂದು ಸನ್ನಿವೇಶ ಬದುಕಿನಲ್ಲಿ ಉಂಟಾಗುತ್ತದಲ್ಲ ಎಂದನಿಸಿತವರಿಗೆ. ಮಾತಾಡಲಿಲ್ಲ; ಅವರ ಮುಗುಳುನಗೆ ಒಂದಷ್ಟು ಹೊತ್ತು ಹಾಗೆಯೇ ಉಳಿದು ಬಿಟ್ಟಿತು. ನರಹರಿಯಲ್ಲಿ ಆದ ಅಪೂರ್ವ ಪರಿವರ್ತನೆಯನ್ನು ನೋಡಿ ಅವರು ಮೂಕರಾಗಿದ್ದರು.

ಚಹಾಪಾನ ಆದ ನಂತರ ನರಹರಿ, ಸೂರ್ಯಕಾಂತ ರಾನಡೆಯವರೊಡನೆ, 'ಸರ್, ಹೇಗೂ ಬಂದಿದ್ದೀರಿ. ಎಲ್ಲರನ್ನೂ ಉದ್ದೇಶಿಸಿ ಒಂದು ಚಿಕ್ಕ ಉಪನ್ಯಾಸ ಮಾಡಿ' ಎಂದ.

'ವಿಷಯ?'

ರಾನಡೆ ಕೇಳಿದರು.

'ಯಾವ ವಿಷಯವೂ ಆಗಬಹುದು. ಸಭೆ ಅವಲೋಕಿಸಿದರೆ ನಿಮಗೇ ತಿಳಿಯುತ್ತೆ' ಎಂದ ನರಹರಿ ಮುಗುಳುನಗುತ್ತಾ.

ಜೆರುಸಲೇಮ್‌ನ ದಟ್ಟ ಕಾನನ ಮತ್ತು ಪರ್ವತಶ್ರೇಣಿಯ ಮೇಲಿಂದ ವಿಮಾನ ಹಾರುವಾಗ ಅಭಿ ಮತ್ತು ಮುರಾರಿಗೆ ಹಿಮಾಲಯ ಪರ್ವತ ಶ್ರೇಣಿಯ ಮೇಲಿಂದ ಹಾರುತ್ತಿರುವಂತೆ ಭಾಸವಾಯಿತು.

ಬೆಂಗಳೂರಿನಿಂದ ಟೆಲ್ ಅವೀವ್ ವರೆಗೆ ನೇರ ಹಾರಾಟ ಇಲ್ಲದ್ದರಿಂದ ನಡುವೆ ಎರಡು ಕಡೆ ತಡೆದು ಮುಂದೆ ಹೋಗುವ ಹದಿನೈದು ಗಂಟೆಗಳ ದೀರ್ಘ ಪ್ರಯಾಣದಲ್ಲಿ ಅಭಿ ಮತ್ತು ಮುರಾರಿ ಇಸ್ರೇಲಿನಿಂದ ಬಂದ ಮೇಲೆ ಮಾಡಬೇಕಾದುದರ ಬಗ್ಗೆ ಬಹಳ ಹೊತ್ತು ಚರ್ಚಿಸಿದರು. ಇಬ್ಬರೂ ತಮ್ಮ ಚರ್ಚೆಯ ವಿವರಗಳನ್ನು ಲ್ಯಾಪ್‌ಟಾಪಿನಲ್ಲಿ ದಾಖಲಿಸಿಕೊಂಡರು.

ಟೆಲ್ ಅವೀವ್‌ನಲ್ಲಿ ಅವರನ್ನು ಸ್ವಾಗತಿಸಲು ಡಾಕ್ಟರ್ ಅಡಿನ ಕಾದಿದ್ದಳು. ಅವರನ್ನು ಕೊಂಡೊಯ್ಯಲು ಕಾರು ಕಾದಿತ್ತು. ಟೆಲ್‌ಅವೀವ್ ಯೂನಿವರ್ಸಿಟಿಯ ಇಬ್ಬರು ಆಫೀಸರ್ ಅವರನ್ನು ಯೂನಿವರ್ಸಿಟಿಯ ಗೆಸ್ಟ್ ಹೌಸಿಗೆ ಕರೆದುಕೊಂಡು ಹೋದರು.

## ವೇದನೆ

ಅವಳು ಸಿಕ್ಕಳು
ನೋಡಿ ನಕ್ಕಳು
ಪ್ರೇಮ ನಿವೇದನೆ ಮಾಡಿ
ಕೊಳ್ಳಲಾಗಲಿಲ್ಲ ನಾನು
ಪುಕ್ಕಲು!

★ **ಕಾಸರಗೋಡು ಅಶೋಕ್ ಕುಮಾರ್**




ಅವರ ಜೊತೆಯಲ್ಲಿ ಗೆಸ್ಟ್‌ಹೌಸಿಗೆ ಬಂದ ಪ್ರೊಫೆಸರ್ ಅಡಿನ, 'ನಮ್ಮ ದೇಶದಲ್ಲಿ ಮಳೆಯ ಸಹಿತ ಒಳ್ಳೆಯ ಹವೆಯಿರುವ ಕಾಲ ಇದೇ, ಫೆಬ್ರವರಿ. ಈ ಕಾಲದಲ್ಲೇ ನೀವು ಬಂದಿದ್ದೀರಿ. ಇನ್ನೆರಡು ತಿಂಗಳು ತುಂಬಾ ಪ್ರವಾಸಿಗಳು ಬರುತ್ತಾರೆ. ನಿಮ್ಮನ್ನು ಬೇಕಾದಲ್ಲಿಗೆ ಕರೆದುಕೊಂಡು ಹೋಗುವ ಡ್ರೈವರ್, ಇಂಗ್ಲಿಷ್ ಮಾತಾಡಬಲ್ಲ ಟೂರಿಸಮ್ ಗೈಡ್ ಕೂಡ ಆಗಿರುತ್ತಾನೆ' ಎಂದರು.

ಮರುದಿನ ಅಭಿ ಮತ್ತು ಮುರಾರಿಗೆ ಯೂನಿವರ್ಸಿಟಿಯ ಸೆಮಿನಾರ್ ಹಾಲ್ಗೆ ಬರಲು ಕರೆ ಬಂತು. ಬಿನ್ಯಮ್ ಮತ್ತು ಚನನ್ಯ ಎಂಬ ಇಬ್ಬರು ಪ್ರೊಫೆಸರು ತಮ್ಮ ಹೆಸರು ಮತ್ತು ಪರಿಚಯ ಹೇಳಿ ಕೈಕುಲುಕಿ ಸ್ವಾಗತಿಸಿ ಕುಳಿತುಕೊಳ್ಳಲು ಹೇಳಿದರು. ಅಭಿ ಮತ್ತು ಮುರಾರಿ ತಮ್ಮ ಹೆಸರು ಹೇಳಿದ ಎರಡು ನಿಮಿಷದ ಉಭಯ ಕುಶಲೋಪರಿಯ ಬಳಿಕ ಹೇಳಿದರು, 'ನಿಮ್ಮ ಬಯೋ ಡೇಟಾ ಓದಿದ ನಂತರ, ನಮಗೆ ನಿಮ್ಮ ಬಗ್ಗೆ ನಿಮ್ಮನ್ನೇ ಕೇಳಿ ತಿಳಿದುಕೊಳ್ಳುವುದು ಏನೂ ಇಲ್ಲ ಅಂತ ಅನಿಸಿದೆ' ಎಂದು ಬಿನ್ಯಮ್ ನಕ್ಕು, 'ಇನ್‌ಫಾರ್ಮೇಶನ್ ಟೆಕ್ನಾಲಜಿಯಲ್ಲಿ ಏನೇನಿದೆಯೋ ಅದೆಲ್ಲವನ್ನೂ ಅಮೆರಿಕೆ ಮತ್ತು ಜಪಾನಿನಲ್ಲಿ ತಿಳಿದುಕೊಂಡಿದ್ದೀರಿ. ಅದರಲ್ಲಿ ತುಂಬಾ ಕೆಲಸ ಮಾಡಿದ್ದೀರಿ. ಅದರ ಬಗ್ಗೆ ಹೆಚ್ಚು ತಿಳಿದುಕೊಳ್ಳುವಂಥದು ಈ ದೇಶದಲ್ಲಿ ಇಲ್ಲ' ಎಂದರು.

'ನಾವು ಇಂಗ್ಲಿಷಿನಲ್ಲಿ ಮಾತಾಡಬೇಕಾಗುತ್ತದೆ. ಸ್ವಲ್ಪವಾದರೂ ಯಿಡ್ಡಿಶ್ ಕಲಿತುಕೊಂಡು ಬರಬೇಕಿತ್ತು ಅಂತನಿಸಿತ್ತೆ' ಅಭಿ ಮುಗುಳ್ನಗುತ್ತಾ ಹೇಳಿದ. ಇಸ್ರೇಲಿಗೆ ಬಂದ ಮೇಲಷ್ಟೇ ಯಿಡ್ಡಿಶ್ ಕಲಿಯಲು ಸಾಧ್ಯ' ಎಂದು ಪ್ರೊಫೆಸರ್ ಚನನ್ಯ ನಕ್ಕು, 'ನಾವು ಇಂಗ್ಲಿಷಿನಲ್ಲೇ ಮಾತಾಡೋಣ' ಎಂದರು.

ಮುರಾರಿ ಹೇಳಿದ, 'ಇಸ್ರೇಲಿನಲ್ಲಿ ಐಟಿಗೆ ಸಂಬಂಧಿಸಿ ಏನು ಹೊಸದಾಗಿ ಕಂಡುಕೊಳ್ಳಲಿಕ್ಕೆ ಇಲ್ಲ ಎಂಬ ನಿಮ್ಮ ಮಾತನ್ನು ನಾವು ಒಪ್ಪುತ್ತೇವೆ. ಒಂದರ್ಥದಲ್ಲಿ, ನಮ್ಮ ಅಧ್ಯಯನ ದಿಕ್ಕು ಬದಲಿಸಿದೆ. ನಾವು ನಮ್ಮ ದೇಶಕ್ಕೆ ಮರಳಿದ ಬಳಿಕ, ಇಸ್ರೇಲ್ ಮಣ್ಣಿನಲ್ಲಿ ಆದ ನೈಸರ್ಗಿಕ ಪವಾಡದಿಂದ ನಮ್ಮ ಕೃಷಿಕರು ಮಾತ್ರವಲ್ಲ, ಕೃಷಿಕರಲ್ಲದ ಕೃಷ್ಯುತ್ಪನ್ನದ ಫಲಾನುಭವಿಗಳಾಗಿರುವ ಇಡೀ ದೇಶದ ಜನ ಕಂಡುಕೊಳ್ಳಬೇಕಾದ ಸತ್ಯ ಏನು ಎಂಬುದನ್ನು ಜನರಿಗೆ ಮನವರಿಕೆ ಮಾಡುತ್ತೇವೆ. ನೀವು ಹೇಳಿದ್ದು ಸರಿ. ನಾವು ಇಲ್ಲಿ ಏನೂ ಮಾಡಲಿಕ್ಕಿಲ್ಲದೆ ಪ್ರವಾಸಿಗಳಂತೆ ಸುತ್ತಾಡುವುದರಲ್ಲಿ ಕಾಲ ಕಳೆಯಲು ಇಚ್ಛಿಸುವುದಿಲ್ಲ. ಮೂರು ತಿಂಗಳು ಕಳೆಯಿತು; ಇನ್ನು ಒಂದು ತಿಂಗಳು ಇದ್ದು, ವರ್ಷ ವರ್ಷಗಳ ಕಾಲ ನೀವು ಪಟ್ಟ ಶ್ರಮ ಯಾವ ರೀತಿಯದು ಎಂದು ಕೂಲಂಕಶವಾಗಿ ಅರ್ಥ ಮಾಡಿಕೊಂಡು ನಮ್ಮ ದೇಶಕ್ಕೆ ಹೋಗುತ್ತೇವೆ' ಎಂದ.

'ಐಟಿ ಇವತ್ತು ಕಳ್ಳಕಾಕರ, ಕ್ರಿಮಿನಲುಗಳ ಅಡ್ಡೆಯಾಗಿದೆ. ಐಟಿಯಲ್ಲಿ ಸಜ್ಜನರನ್ನು ದೋಚುವ ಕೆಲಸ ದಿನಾ ನಡೆಯುತ್ತಿದೆ. ಬೇರೆ ಏನೇನು ಅನ್ಯಾಯ ನಡೆಯುತ್ತಿದೆ ಅಂತ ನಿಮಗೆ ಗೊತ್ತಿದೆ ಅದರಲ್ಲಿ ಕೆಲಸ ಮಾಡುವವರು ಕಂಪೆನಿಗಳ ಗುಲಾಮರಾಗಿ ದಿನಕ್ಕೆ ಹದನೆಂಟು ಗಂಟೆ ದುಡಿದು ತಮ್ಮ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ' ಎಂದು ತುಸು ತಡೆದು, ಈ ವಿಚಾರ ಹೇಳಿದರೆ ಮುಗಿಯುವಂಥದಲ್ಲ. ಕೃಷಿ ಮತ್ತು ಐಟಿಯನ್ನು ಹೇಗೆ ಜೋಡಿಸಬಹುದು ಎಂಬ ನಿಮ್ಮ ಪ್ರಶ್ನೆಗೆ, ನೀವು ನಾವು ಸೇರಿ ಉತ್ತರ ಕಂಡುಕೊಳ್ಳಬೇಕಾಗಿದೆ' ಎಂದರು ಪ್ರೊಫೆಸರ್ ಚನನ್ಯ.

**(ಸಶೇಷ)**